# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 170 (272) |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ |
| ಉತ್ತರಿಸಬೇಕಾದ ದಿನಾಂಕ | : | 18.08.2026 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪೌರಾಡಳಿತ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ನಗರ ಸಭೆ ಮತ್ತು ಪುರಸಭೆಗಲ್ಲಿ ಕಾವೇರಿ ತಂತ್ರಾಂಶ ಸಮಸ್ಯೆಯಿಂದ ಇ-ಖಾತಾ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು); | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಖಾತಾ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ 07 ದಿನಗಳ ಅವಧಿಯಲ್ಲಿ ಇ-ಖಾತಾ ನೀಡಲು ಕ್ರಮವಹಿಸಲಾಗುತ್ತಿದ್ದು, ತಂತ್ರಾಂಶವು ಸ್ಥಗಿತಗೊಂಡಿರುವುದಿಲ್ಲ.<br><br>ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ಸೃಜನೆ ಮಾಡಲಾಗುತ್ತಿದ್ದು, ಸದರಿ ಮಾಹಿತಿಯನ್ನು ಸಂಯೋಜನೆ ಮೂಲಕ ಕಾವೇರಿ 2.0 ತಂತ್ರಾಂಶಕ್ಕೆ ಹಂಚಿಕೊಳ್ಳಲಾಗುತ್ತಿದ್ದು, ಅದರನ್ವಯ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದೆ. |
| ಆ) | 2025ರ ಡಿಸೆಂಬರ್‌ನಲ್ಲಿ ಆರಂಭಿಸಿರುವ ಈ ಯೋಜನೆಯು, 2-3 ತಿಂಗಳಲ್ಲಿ ತಂತ್ರಾಂಶದ ಸಮಸ್ಯೆ ಎಂದು ಹೇಳುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇ-ಖಾತಾ ನಿರ್ವಹಿಸುವ ಸಲುವಾಗಿ ಯಾವ ಸಾಫ್ಟ್‌ವೇರ್ ಕಂಪನಿಗೆ ಈ ಯೋಜನೆಯನ್ನು ವಹಿಸಲಾಗಿತ್ತು; (ಆ ಕಂಪನಿಯ ವಿವರ ನೀಡುವುದು); | ಇ-ಆಸ್ತಿ ತಂತ್ರಾಂಶವನ್ನು ಕೇಂದ್ರ ಸರ್ಕಾರದ ಅಧೀನದ ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ಬೆಂಗಳೂರು ರವರಿಂದ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ತಂತ್ರಾಂಶವನ್ನು Karnataka State Data Centre (KSDC) ನಲ್ಲಿ host ಮಾಡಲಾಗಿರುತ್ತದೆ. ಸದರಿ ಡೇಟಾ ಸೆಂಟರ್ ನ್ನು ನವೆಂಬರ್ 2025 ರಲ್ಲಿ ಉನ್ನತೀಕರಣಗೊಳಿಸಲಾಗಿರುತ್ತದೆ. |
| ಇ) | ಈ ತಂತ್ರಾಂಶದ ಸಮಸ್ಯೆಯಿಂದ ಆನ್ ಲೈನ್ ಬಿಲ್ಲಿಂಗ್ ಲೈಸನ್ಸ್ ಪಡೆಯುವುದು ಆಸ್ತಿ, ವಹಿವಾಟು, ಪೌತಿ ಖಾತೆ ವರ್ಗಾವಣೆಗೆ ತೊಂದರೆ ಆಗಿರುವುದು ಹಾಗೂ ಇದರಿಂದ ಸರ್ಕಾರಕ್ಕೆ ಬಹುದೊಡ್ಡ ಮೊತ್ತ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ 2.0 ತಂತ್ರಾಂಶ ಸರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಇ-ಖಾತಾ ಸೃಜನೆ ಮತ್ತು ಹಕ್ಕು ವರ್ಗಾವಣೆ ಪ್ರಕ್ರಿಯೆಯನ್ನು ಇ-ಆಸ್ತಿ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಪ್ರಸ್ತುತ ಯಾವುದೇ ತಾಂತ್ರಿಕ ಸಮಸ್ಯೆಗಳಿರುವುದಿಲ್ಲ. ಕಟ್ಟಡ ಪರವಾನಿಗೆ / ಅನುಮತಿ ಪ್ರಕ್ರಿಯೆಯನ್ನು ನಿರ್ಮಾಣ್-2 ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಪಡೆಯಬಹುದಾಗಿರುತ್ತದೆ.<br><br>ಆಸ್ತಿ ವಹಿವಾಟುಗಳಿಗೆ ಸಂಬಂಧಿಸಿದಂತೆ ಸ್ವತ್ತುಗಳ ಇ- ಆಸಿ. ಖಾತಾ ದಾಖಲೆಗಳನ್ನು ಪಡೆದು ನೋಂದಣಿಗೆ ದಸ್ತಾವೇಜುಗಳನ್ನು ಸಲ್ಲಿಸಲಾಗುತ್ತಿದ್ದು, ಅಂತಹ ದಸ್ತಾವೇಜುಗಳನ್ನು ಇ-ಆಸ್ತಿ ತಂತ್ರಾಂಶದ ಸಂಯೋಜನೆ ಮೂಲಕ ಸ್ವತ್ತಿನ ಮಾಹಿತಿಯನ್ನು ಪಡೆದು ತಂತ್ರಾಂಶದಲ್ಲಿ ಕಾವೇರಿ-2.0 ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು, ನೋಂದಣಿ ಸಮಯದಲ್ಲಿ ಯಾವುದೇ ಸಮಸ್ಯೆಗಳು ಇರುವುದಿಲ್ಲ. |

ಸಂಖ್ಯೆ: ನಅಇ 222 ಜಿಇಎಲ್ 2026 (ಇ)

(ಹೆಚ್. ಸಿ. ಬಾಲಕೃಷ್ಣ)
ಪೌರಾಡಳಿತ ಸಚಿವರು